## ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

## ಸಿ.ಸಿ. ನಂ. 732/16

ಸಿ.ಡಬ್ಲ್ಯು 25
ಪಿ.ಡಬ್ಲ್ಯು 23

| | | |
|---|---|---|
| ಸಾಕ್ಷಿದಾರರ ಹೆಸರು | – | ರಾಘವೇಂದ್ರ ಎಸ್. |
| ತಂದೆಯ ಹೆಸರು | – | ಶಿವಮಲ್ಲಪ್ಪಾ |
| ವಯಸ್ಸು | – | 43 ವರ್ಷ |
| ಉದ್ಯೋಗ | – | ಪೊಲೀಸ್ ಇನ್ಸಪೆಕ್ಟರ್, ಸಿ.ಐ.ಡಿ., ಬೆಂಗಳೂರು |
| ವಾಸ್ತವ್ಯ | – | ಬೆಂಗಳೂರು |

(ಇಂದು ದಿನಾಂಕ 24-11-2021 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ –ಮಾನ್ಯ ಸ.ಸ.ಅ. ರವರಿಂದ**

ನಾನು ಅಕ್ಟೋಬರ 2006 ರಿಂದ ಏಪ್ರೀಲ್ 2008 ರ ವರೆಗೆ ಗೋಕರ್ಣ ಪೊಲೀಸ್ ಠಾಣೆಯಲ್ಲಿ ಆರಕ್ಷಕ ಉಪನಿರೀಕ್ಷಕನಾಗಿ ಕರ್ತವ್ಯನಿರ್ವಹಿಸಿರುತ್ತೇನೆ.

ದಿನಾಂಕ 10-07-2007 ರಂದು ಪ್ರಕರಣದ ಕಡತವನ್ನು ಚಾ.ಸಾ.22 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ದಿನಾಂಕ 28-07-2007 ರಂದು 3 ನೇ ಆರೋಪಿಯು ಮಾನ್ಯ ಉಚ್ಚ ನ್ಯಾಯಾಲಯ, ಕರ್ನಾಟಕದಿಂದ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ಠಾಣೆಗೆ ಹಾಜರಾದ ಮೇರೆಗೆ ಆತನನ್ನು ದಸ್ತಗಿರಿ ಮಾಡಿ, ದಸ್ತಗಿರಿ ಕ್ರಮಗಳನ್ನು ಅನುಸರಿಸಿ ಸೂಕ್ತ ಜಾಮೀನಿನ ಮೇರೆಗೆ ಮಾನ್ಯ ನ್ಯಾಯಾಲಯದ ಆದೇಶದಂತೆ ಬಿಡುಗಡೆ ಮಾಡಿರುತ್ತೇನೆ. 3 ನೇ ಆರೋಪಿಗೆ ಮಾದರಿ ಸಹಿ ಹಾಗೂ ಮಾದರಿ ಬರವಣಿಗೆಯನ್ನು ನೀಡುವಂತೆ

ತಿಳುವಳಿಕೆ ಪತ್ರವನ್ನು ನೀಡಿ, ಅವರಿಂದ ಮಾದರಿ ಸಹಿ ಹಾಗೂ ಬರವಣಿಗೆಯನ್ನು ಪಡೆದುಕೊಂಡಿರುತ್ತೇನೆ.

ದಿನಾಂಕ 28-08-2007 ರಂದು ಆರೋಪಿತರಿಂದ ಪಡೆದಂತಹ ಮಾದರಿ ಸಹಿ ಮತ್ತು ಬರವಣಿಗೆಗಳನ್ನು ತಜ್ಞರ ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ.

ಪ್ರಕರಣದ ಮುಂದಿನ ತನಿಖೆಯನ್ನು ಚಾ.ಸಾ. 26 ರವರಿಗೆ ನೀಡಿರುತ್ತೇನೆ. ಸಾಕ್ಷಿಯು 3 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು – 1 ನೇ ಆರೋಪಿ ಪರ ಶ್ರೀ ಎಂ.ಎಲ್.ಎನ್. ವಕೀಲರಿಂದ**

1 ಮತ್ತು 2 ನೇ ಆರೋಪಿತರ ಮಾದರಿ ಸಹಿ ಮತ್ತು ಬರವಣಿಗೆ ಹಿಂದಿನ ತನಿಖಾಧಿಕಾರಿಗಳು ಪಡೆದುಕೊಂಡಿರುತ್ತಾರೆ. ಆರೋಪಿತರ ಸಹಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲು ಸಂಬಂಧಪಟ್ಟ ವರ್ಷದ ದಾಖಲಾತಿಗಳನ್ನು ಸಹ ಕಳುಹಿಸಿಕೊಟ್ಟಿರುತ್ತೇನೆ. ನಾನು 1 ಮತ್ತು 2 ನೇ ಆರೋಪಿತರ ಮಾದರಿ ಸಹಿ ಮತ್ತು ಬರವಣಿಗೆಯನ್ನು ಪಡೆದುಕೊಳ್ಳದೇ ಇರುವ ಕಾರಣ ಅವರ ಸಹಿಯನ್ನು ನಿಖರವಾಗಿ ಗುರುತಿಸಲು ಸಾಧ್ಯವಿರುವುದಿಲ್ಲ ಎಂದರೆ ಸರಿಯಲ್ಲ. ಒಪ್ಪಿದ ಸಹಿ ಮತ್ತು ಪ್ರಶ್ನಿತ ಸಹಿ ಹಾಗೂ ಬರವಣಿಗೆಗಳನ್ನು ನಾನು ತಜ್ಞರಿಗೆ ಕಳುಹಿಸಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು – 2 ನೇ ಆರೋಪಿ ಪರ ಶ್ರೀ ಆರ್.ಎ.ಎಚ್. ವಕೀಲರಿಂದ**

1 ನೇ ಆರೋಪಿ ಪರ ಮಾಡಲಾದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

**ಪಾಟೀ ಸವಾಲು – 3 ನೇ ಆರೋಪಿ ಪರ ಶ್ರೀ ಎಸ್.ಯು.ಎ. ವಕೀಲರಿಂದ**

ನನ್ನ ತನಿಖಾ ಕಾಲದಲ್ಲಿ ಸ್ವಯಂ ಸೇವಾ ಸಂಘಗಳ ಕಾರ್ಯನಿರ್ವಹಣೆಯ ಬಗ್ಗೆ ವಿಚಾರಣೆ ಮಾಡಿರುತ್ತೇನೆ. ಹಿಂದಿನ ತನಿಖಾಧಿಕಾರಿಗಳು ಆ ಬಗ್ಗೆ ದಾಖಲಾತಿಗಳನ್ನು ಪಡೆದುಕೊಂಡಿರುತ್ತಾರೆ. ನನ್ನ ಹಿಂದಿನ ತನಿಖಾಧಿಕಾರಿಗಳು ಮಾಡಿದ ತನಿಖೆಯನ್ನು ನಾನು ಪರಿಶೀಲನೆ ಮಾಡಿದ್ದು, ಸಮರ್ಪಕ ಎಂದು

ಕಂಡುಬಂದಿರುತ್ತದೆ. ಹಿಂದಿನ ತನಿಖಾಧಿಕಾರಿಗಳು ನಡೆಸಿದ ತನಿಖೆಯಲ್ಲಿ ಪಡೆದುಕೊಂಡಂತಹ ದಾಖಲಾತಿಗಳನ್ನು ಪರಿಶೀಲನೆ ಮಾಡಿದ್ದು, ಯಾವ ಯಾವ ದಾಖಲಾತಿಗಳು ಇತ್ತು ಎಂದು ನಿಖರವಾಗಿ ಹೇಳಲು ಈಗ ಸಾಧ್ಯವಿರುವುದಿಲ್ಲ. ನಿ.ಡಿ. 1 ರಲ್ಲಿ ಉಲ್ಲೇಖಿಸಲಾಗಿರುವ ದಾಖಲಾತಿಗಳನ್ನು ಹಾಜರುಪಡಿಸದೇ ಇದ್ದು, ಆ ಬಗ್ಗೆ ನನ್ನ ತನಿಖಾ ಕಾಲದಲ್ಲಿ ವಿಚಾರಣೆ ಮಾಡಿ ಸದರಿ ದಾಖಲಾತಿಗಳನ್ನು ಪರಿಶೀಲಿಸಿದ್ದೀರಾ ಎಂದರೆ ನನಗೆ ನೆನಪಿಲ್ಲ. ಸೂಕ್ತ ರೀತಿಯಲ್ಲಿ ನಾನು ಪ್ರಕರಣದ ತನಿಖೆಯನ್ನು ಮಾಡದೇ ಹಿಂದಿನ ತನಿಖಾಧಿಕಾರಿಗಳು ನನ್ನ ಮೇಲಾಧಿಕಾರಿಗಳಾದ ಕಾರಣ ಯಾಂತ್ರಿಕವಾಗಿ ತನಿಖೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. 3 ನೇ ಆರೋಪಿ ಯಾವುದೇ ಅಪರಾಧ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾದಂ. ಕುಮಟಾ